# ಹೊಸ ವರ್ಷದ ಹಾರ್ದಿಕ ಅಭಿನಂದನೆಗಳು – 2013

ಮಾನ್ಯರೇ,

ನಿಮಗೆಲ್ಲರಿಗೂ ನೂತನ ವರ್ಷದ ಹಾರ್ದಿಕ ಶುಭಾಶಯಗಳು.

'ವಿವೇಕಪ್ರಭ' ಪತ್ರಿಕೆಯು ತನ್ನ 13 ವರ್ಷಗಳ ಸೇವೆಯನ್ನು ಸುಸಂಪನ್ನಗೊಳಿಸಿ, 14ನೇ ವರ್ಷಕ್ಕೆ ಪದಾರ್ಪಣ ಮಾಡುತ್ತಿರುವ ಈ ಶುಭಗಳಿಗೆಯಲ್ಲಿ, ಆತ್ಮೀಯ ಚಂದಾದಾರರಾದ ನಿಮಗೆಲ್ಲರಿಗೂ, ನಿಮ್ಮ ಸಹಕಾರ ಮತ್ತು ಪ್ರೋತ್ಸಾಹಗಳಿಗಾಗಿ ಹಾರ್ದಿಕ ಧನ್ಯವಾದಗಳು.

ಈ ವರ್ಷ ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವವನ್ನು ವಿಶ್ವಾದ್ಯಂತ ಆಚರಿಸಲಾಗುತ್ತಿದೆ. ವಿಶ್ವಮಾನವ ವಿವೇಕಾನಂದರಿಗೆ 'ವಿವೇಕಪ್ರಭ'ವು ತನ್ನದೇ ಆದ ವಿಶಿಷ್ಟರೀತಿಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದೆ. ಈಗ ನಿಮ್ಮ ಕೈಯಲ್ಲಿರುವ 'ವಿವೇಕಾನಂದ ವಿಚಾರಸುಧೆ' ವಿಶೇಷ ಸಂಚಿಕೆಯು ಆ ಮಹಾಚೇತನದ ಅಡಿದಾವರೆಯಲ್ಲಿ, ವಿವೇಕಪ್ರಭವು ಅರ್ಪಿಸುತ್ತಿರುವ ಭಕ್ತಿಮಾಧುರ್ಯದಿಂದ ತುಂಬಿರುವ ವಾಙ್ಮಯಪುಷ್ಪವಾಗಿದೆ.

ಈ ಸಂದರ್ಭದಲ್ಲಿ, ನಮಗೆ ಎಲ್ಲ ರೀತಿಯಲ್ಲಿಯೂ ಸಹಕರಿಸುತ್ತಿರುವ ನಮ್ಮ ಸಂಪಾದಕ ಮಂಡಲಿಯ ಸದಸ್ಯರಿಗೆ, ನಮ್ಮೆಲ್ಲ ಲೇಖಕಬಳಗಕ್ಕೆ, ಪತ್ರಿಕೆಗೆ ಹೊಸ ಹೊಸ ಚಂದಾದಾರರನ್ನು ನಿಯಮಿತವಾಗಿ ಮಾಡಿಕೊಡುತ್ತಿರುವ ಕರ್ನಾಟಕದಾದ್ಯಂತ ಇರುವ ರಾಮಕೃಷ್ಣ ಆಶ್ರಮಗಳಿಗೆ ಮತ್ತು ಇತರ ಚಂದಾಸಂಗ್ರಾಹಕರಿಗೆ, ಕರಡುಪ್ರತಿಯನ್ನು ಪರಿಷ್ಕರಿಸಲು ಸಹಾಯ ಮಾಡುತ್ತಿರುವವರಿಗೆ, ನಮ್ಮೆಲ್ಲ ಜಾಹೀರಾತುದಾರರಿಗೆ, ವಿವೇಕಪ್ರಭ ಪತ್ರಿಕೆಯ ಮುದ್ರಣಕಾರರಾದ ಬೆಂಗಳೂರಿನ 'ಮಯೂರ್ ಗ್ರಾಫಿಕ್ಸ್' ನ ಮಾಲೀಕರಾದ ಶ್ರೀ ಪಾರ್ಥಸಾರಥಿ ಅವರಿಗೆ, ನಮ್ಮ ಕಾರ್ಯಾಲಯದ ಸಿಬ್ಬಂದಿಗೆ ಸಹಕರಿಸುತ್ತಿರುವ ಹಲವಾರು ಸ್ವಯಂಸೇವಕರಿಗೆ, ಪ್ರತಿ ತಿಂಗಳೂ ಪತ್ರಿಕೆಯ ಪ್ರತಿಗಳನ್ನು ರವಾನಿಸುತ್ತಿರುವ ಮೈಸೂರು ಯಾದವಗಿರಿ ಅಂಚೆಕಛೇರಿಯ ಸಿಬ್ಬಂದಿಗೆ ಮತ್ತು ವಿವೇಕಪ್ರಭ ಪತ್ರಿಕೆಯ ಪ್ರಕಟನೆಯಲ್ಲಿ ಹಲವಾರು ರೀತಿಯಲ್ಲಿ ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲ ಸ್ನೇಹಿತರಿಗೂ ಈ ಮೂಲಕ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ.

ಈ ಸಂತಸದ ಸಂದರ್ಭದಲ್ಲಿ, ಪತ್ರಿಕೆಯ ಉತ್ತರೋತ್ತರ ಅಭಿವೃದ್ಧಿಗೆ ಮತ್ತು ಚಂದಾದಾರರ ಹೆಚ್ಚಳಕ್ಕಾಗಿ ಮುಂದೆಯೂ ನಮಗೆ ಸಹಕಾರ ನೀಡಬೇಕೆಂದು ಹಿತೈಷಿ ಓದುಗರಾದ ತಮಗೆಲ್ಲರಿಗೂ ಕೇಳಿಕೊಳ್ಳುತ್ತೇವೆ.

ಇಂತಿ ಭಗವತ್ಸೇವೆಯಲ್ಲಿ ತಮ್ಮವ

ಸ್ವಾಮಿ ಮುಕ್ತಿದಾನಂದ

ವ್ಯವಸ್ಥಾಪಕ ಸಂಪಾದಕರು

## ವಿವೇಕಪ್ರಭ ಪತ್ರಿಕೆಯ ಪೋಷಕರು

| | |
|---|---|
| ಶ್ರೀ ಮಲ್ಲಿಕಾರ್ಜುನಯ್ಯ | ಕೊಳ್ಳೇಗಾಲ |
| ಶ್ರೀ ಲಕ್ಷ್ಮಣರಾವ್ ಜಾಧವ್ | ಚಿತ್ರದುರ್ಗ |
| ಕಾರ್ಯದರ್ಶಿಗಳು, ಮೈಸೂರು ರೇಸ್ ಕ್ಲಬ್ ಲಿಮಿಟೆಡ್ | ಮೈಸೂರು |
| ಶ್ರೀ ವೆಂಕಟೇಶ್ ಎನ್. | ಬೆಂಗಳೂರು |
| ಶ್ರೀಮತಿ ಪದ್ಮಜಾ ಸುಬ್ರಹ್ಮಣ್ಯ | ಕನಕಪುರ |
| ಶ್ರೀ ಮಾಧವ ತಂತ್ರಿ | ಬೆಂಗಳೂರು |
| ಶ್ರೀ ದಿವಾಕರ ಹಲಸನಾಡು | ಕುಂದಾಪುರ |
| ಶ್ರೀ ಪುಟ್ಟಸ್ವಾಮಯ್ಯ ಪಿ. | ಬೆಂಗಳೂರು |
| ಶ್ರೀಮತಿ ಶಾಂತಾ ಶ್ರೀಕಂಠೇಶ್ವರ | ಬೆಂಗಳೂರು |
| ಶ್ರೀ ರಂಗನಾಥ ಅಯ್ಯರ್ ಜಿ.ಆರ್. | ಬೆಂಗಳೂರು |
| ಶ್ರೀ ಮೌನೇಶ್ವರಾಚಾರ್ ಹೆಚ್.ಸಿ. | ದಾವಣಗೆರೆ |
| ಶ್ರೀ ಮಠದ್ ಕೆ.ಜಿ. | ಹುಬ್ಬಳ್ಳಿ |
| ಶ್ರೀ ಕೇಶವಮೂರ್ತಿ ಐ. ಎಲ್. | ಬೇಲೂರು |
| ಶ್ರೀಮತಿ ಮಹಾದೇವಿ ಎಂ. ಹಳ್ಯಾಲ್ | ಜಮಖಂಡಿ |
| ಶ್ರೀ ದ್ವಾರಕಾನಾಥ್ ಎಂ.ಎಸ್. | ಮೈಸೂರು |
| ಶ್ರೀ ಶ್ರೀನಿವಾಸಮೂರ್ತಿ | ಮೈಸೂರು |
| ಶ್ರೀ ಮೋಹನ ರಾಮ್ | ಬೆಂಗಳೂರು |
| ಶ್ರೀ ನಾಗರಾಜ ಎಸ್. | ನವದೆಹಲಿ |
| ಶ್ರೀ ಬಲರಾಮಯ್ಯ | ಬೆಂಗಳೂರು |
| ಶ್ರೀ ರಾಜಕುಮಾರ ಡಿ.ಎ. | ಬೆಂಗಳೂರು |
| ಶ್ರೀ ಮಲ್ಲಯ್ಯ ಕೆ.ಎಸ್. | ಮೈಸೂರು |